ನಿಮ್ಮಲ್ಲುಂಟಾದ ರಸೋತ್ಪತ್ತಿ ನನಗೂ ಆಯಿತೆಂದರೆ... ಅದಕ್ಕೊಂದು ಕಾರ್ಯಕಾರಣ ಸಂಬಂಧವಿದೆ. ಭಕ್ತ ಭಗವಂತನ ನಡುವೆ ಪ್ರೇಮವೊಂದು ವಿಶೇಷವಲ್ಲ. ನಿಮ್ಮನ್ನು ಗೌರವಿಸಿ, ಆರಾಧಿಸಿದ್ದನ್ನು ಒಪ್ಪಿಕೊಳ್ಳಬಲ್ಲರಾದರೆ ನನ್ನ ಅನಿರ್ಬಂಧಿತ ಪ್ರೇಮವನ್ನೇಕೆ ಅಲ್ಲಗಳೆಯುತ್ತೀರಿ? ನಿಮ್ಮ ಚರಣದೂಳಿ ಇಲ್ಲದೆ ನನ್ನ ಅಲಂಕರಣವಿಲ್ಲ. ನಿಮ್ಮ ವಾಗಾಮೃತವಿಲ್ಲದೆ ನನ್ನ ಹಸಿವು ತಣಿಯದು. ಇಲ್ಲಿರುವ ಸರಸ್ವತಿ ಸಾಕ್ಷಿಯಾಗಿ ನಾನು ನಿಮ್ಮನ್ನು ಒಪ್ಪಿದ್ದೇನೆ, ಒಲಿದಿದ್ದೇನೆ. ನಮ್ಮಿಬ್ಬರ ನಡುವೆ ಸಂಬಂಧ ಸಂವಹನ ಎಲ್ಲವೂ ಸಂಗೀತವೇ. ಆ ಮಹಾ ಸರಸ್ವತಿಗೆ ಯಾವ ಸಂಕೋಲೆಗಳಿಲ್ಲ. ದೇಶ, ಕಾಲ, ವಯಸ್ಸು, ಜಾತಿ ಯಾವುದೂ ಮುಖ್ಯವಲ್ಲ. ನಿಮ್ಮ ಶರೀರದ ಹೊರತಾಗಿಯೂ ನಾನು ನಿಮ್ಮನ್ನು ಪ್ರೇಮಿಸಬಲ್ಲೆ. ಹಾಗೆಂದು ಶರೀರವನ್ನು ಬೇಡವೆನ್ನುವ ಇರಾದೆಯೂ ನನ್ನದಲ್ಲ. ನಿಮ್ಮ ವಯೋಮಾನದ ಇತಿಮಿತಿಗಳು ನನಗೂ ಅರಿವಿದೆ. ಈ ಕುರಿತು ನಾನು ನಿಮ್ಮ ಮಗನೊಡನೆ ಹೇಳಿದೆ. ತುಂಬ ಒಳ್ಳೆಯ ಮಗ. ನಿಮ್ಮಿಬ್ಬರಲ್ಲಿ ಅಂತಹ ಅನುಬಂಧವಿದ್ದರೆ ಮದುವೆಯಾಗಿ ನನ್ನ ಅಭ್ಯಂತರವಿಲ್ಲ ಎಂದರು. ನೀವೂ ಅಷ್ಟೆ – ನನ್ನೊಂದಿಗಿನ ಸಹಜ ಮಧುರ ಪ್ರೇಮವನ್ನು ಒಪ್ಪಿಕೊಳ್ಳಿ; ಇದ್ದುದನ್ನು ಇದ್ದಂತೆಯೆ' ಎಂದು ಹೇಳುವಾಗ ಒಂದಿಷ್ಟು ಕಂಠ ತುಂಬಿ ಬಂದಂತಾಗಿ ಅವರ ಪದತಲದಲ್ಲಿ ಕುಳಿತಳು.

ಕೂಡಿದ್ದ ಹುಬ್ಬುಗಳನ್ನು ತುಸುವೆ ಸಡಿಲಿಸಿ, 'ಆದರೆ ನೀನಾ, ನಿನ್ನ ತಾಯ್ತಂದೆಯರು ಇದನ್ನೊಪ್ಪುತ್ತಾರ?' ಎಂದು ಕೇಳಿದರು. 'ಒಪ್ಪುವುದಿಲ್ಲ. ಸದ್ಯಕ್ಕಂತು ಇಲ್ಲ. ಆದರೆ ಆ ಒಪ್ಪಿಗೆಗೆ ಕಾಯುವ ಅಗತ್ಯವೂ ನನಗಿಲ್ಲ. ಭಕ್ತ ಭಗವಂತನ ಅನುಬಂಧಕ್ಕೆ ಯಾರ ಒಪ್ಪಿಗೆ ಬೇಕಾಗಿದೆ ಗುರೂಜಿ' ಎಂದವಳನ್ನು ಕಂಡು ಗೊಂದಲಗಳೆದ ತಿಳಿಮೊಗದಿಂದ ಅವಳ ಮುಖವನ್ನೇ ನೋಡುತ್ತಾ ನಿಧಾನವಾಗಿ ಎವೆಗಳನ್ನು ಮುಚ್ಚಿದರು.

'ಗುರೂಜಿ, ನಿಜವಾಗಿ ಹೇಳುವೆ. ಈ ಮದುವೆ ಎನ್ನುವುದು ಲೌಕಿಕ ಸೌಕರ್ಯಕ್ಕಾಗಿ ಮಾತ್ರ. ನಾನು ನಿಮ್ಮನ್ನು, ನೀವು ನನ್ನನ್ನು ಮೆಚ್ಚಿ ಒಲಿದು ವರಿಸಿ ಯಾವುದೋ ಕಾಲವಾಗಿದೆ. ಸಂಗೀತ ಸರಸ್ವತಿಯೇ ಅದಕ್ಕೆ ಸಾಕ್ಷಿ' ಎಂದಳು ಹನಿಗಣ್ಣಾಗುತ್ತ.

ಅವರು ಮುಚ್ಚಿದ ಕಣ್ಣನ್ನು ಬಿಚ್ಚದೆಯೇ ತಮ್ಮ ಅಂಗುಲಿಗಳಿಂದ ಅವಳ ನೆತ್ತಿಕೂದಲನ್ನು ಸವರ ತೊಡಗಿದರು.


## ಉಷಾ ನರಸಿಂಹನ್

ಕತೆಗಾರ್ತಿ ಉಷಾ ಮೈಸೂರಿನಲ್ಲಿ ನೆಲೆಸಿರುವ ಗೃಹಿಣಿ. ಅವರ ಮೂರು ಕಾದಂಬರಿಗಳು, ಎರಡು ಕಥಾಸಂಕಲನಗಳು, ಕವನ ಸಂಕಲನಗಳು ಪ್ರಕಟವಾಗಿವೆ. 'ಮಯೂರ'ವೂ ಸೇರಿದಂತೆ ಕೆಲವು ಪತ್ರಿಕೆಗಳಲ್ಲಿ ಕತೆಗಳನ್ನು ಪ್ರಕಟಿಸಿದ್ದಾರೆ. 'ಪಯಣರಾಗ' ಎಂಬ ಭಾವಗೀತೆಗಳ ಧ್ವನಿ ಸುರಳಿಯನ್ನು ಹೊರತಂದಿದ್ದಾರೆ. ಅವರ ನಾಟಕ – 'ಕದಳಿ ಕಲ್ಯಾಣ'.